ಸಾಕ್ಷಿಯನ್ನು ದಿನಾಂಕ 14.08.2024 ರಂದು ಕರೆದು ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆಃ ಶ್ರೀ ಅರ್ ಕೆ ವಿ ವಕೀಲರಿಂದಃ

ನನ್ನ ಸಾಕ್ಷ್ಯದ ಹೇಳಿಕೆಯನ್ನು ಪ್ರಮಾಣಪತ್ರದ ರೂಪದಲ್ಲಿ ನನ್ನ ಹೇಳಿಕೆಯಂತೆ ತಯಾರಿಸಿ ಸಲ್ಲಿಸಿದ್ದು ಅದರಲ್ಲಿರುವ ವಿಚಾರಗಳು ಸತ್ಯವಾಗಿರುತ್ತವೆ. ಸದರಿ ಈ ಪ್ರಮಾಣಪತ್ರದಲ್ಲಿರುವ ಸಹಿ ನನ್ನದೇ ಇರುತ್ತದೆ. ನನ್ನ ವಾದಕ್ಕೆ ಪೂರಕವಾಗಿ

ಪ್ರತಿವಾದಿ ನನಗೆ ದಿನಾಂಕ 22.08.2018 ರಂದು ಬರೆದುಕೊಟ್ಟಿರುವ ಕ್ರಯದ ಕರಾರು ಪತ್ರವನ್ನು ಹಾಜರು ಮಾಡಿದ್ದು ಅದನ್ನು ನಿಪಿ 1 ಎಂದು, ನಿಪಿ 1 ಕ್ಕೆ ಪ್ರತಿವಾದಿ ಪ್ರತಿ ಪುಟದಲ್ಲಿಯೂ ಸಹಿ ಮಾಡಿದ್ದು ಕೊನೆಯ ಪುಟದಲ್ಲಿರುವ ಪ್ರತಿವಾದಿಯ ಸಹಿಯನ್ನು ನಿಪಿ 1(ಎ) ಎಂದು, ನನ್ನ ಸಹಿಯನ್ನು ನಿಪಿ 1(ಬಿ) ಎಂದು, ನಿಪಿ 1 ಕ್ಕೆ ಸಾಕ್ಷಿದಾರರಾಗಿ ಬಿ.ಕೃಷ್ಣಮೂರ್ತಿ ಮತ್ತು ಪ್ರತಿವಾದಿಯ ಗಂಡ ಸಾಕ್ಷಿಯಾಗಿ ಸಹಿ ಮಾಡಿದ್ದು, ಬಿ.ಕೃಷ್ಣಮೂರ್ತಿ ಸಹಿಯನ್ನು ನಿಪಿ 1(ಸಿ ) ಎಂದು, ನಿಪಿ 1 ನ್ನು ಪತ್ರ ಬರಹಗಾರರಾದ ಪ್ರಸಾದ್ ರವರು ತಯಾರಿಸಿದ್ದು ಅವರ ಸಹಿಯನ್ನು ನಿಪಿ 1(ಡಿ) ಎಂದು ಗುರುತಿಸಲಾಯಿತು.

ದಾವಾ ಸ್ವತ್ತಿಗೆ ಸಂಬಂಧಿಸಿದ E Khatha extract ಯನ್ನು ಹಾಜರು ಮಾಡಿದ್ದು ಅದನ್ನು **ನಿಪಿ 2** ಎಂದು, ಪ್ರತಿವಾದಿಗೆ ವಕೀಲರ ಮೂಲಕ ನೀಡಿದ ನೋಟೀಸ್ ನ ಕಚೇರಿ ಪ್ರತಿಯನ್ನು **ನಿಪಿ 3** ಎಂದು, ಅಂಚೆ ರಸೀದಿಯನ್ನು **ನಿಪಿ 4** ಎಂದು, ಅಂಚೆ ಸ್ವೀಕೃತಿಯನ್ನು ಹಾಜರು ಮಾಡಿದ್ದು ಅದನ್ನು **ನಿಪಿ5** ಎಂದು, ಪ್ರತಿವಾದಿ ತನ್ನ ವಕೀಲರ ಮೂಲಕ ನೀಡಿದ ಪ್ರತ್ಯುತ್ತರ ನೋಟೀಸ್ ಅನ್ನು ಹಾಜರು ಮಾಡಿದ್ದು ಅದನ್ನು **ನಿಪಿ6** ಎಂದು, ಪ್ರತಿವಾದಿಯ ವಕೀಲರಿಗೆ ದಿಃ 30.08.2021 ರಂದು ನೀಡಿದ ಪ್ರತ್ಯುತ್ತರ ನೋಟೀಸ್ ಅನ್ನು **ನಿಪಿ 7** ಎಂದು, ಅಂಚೆ ರಸೀದಿಯನ್ನು **ನಿಪಿ 8** ಎಂದು, ಅಂಚೆ ಸ್ವೀಕೃತಿಯನ್ನು ಹಾಜರು ಮಾಡಿದ್ದು ಅದನ್ನು **ನಿಪಿ9** ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ** ಶ್ರೀ ಟಿಎನ್ ಎಸ್ ವಕೀಲರಿಂದಃ ಪಾಟೀ ಸವಾಲಿಗೆ ಸಮಯ ಕೋರಿದ್ದು ಮುಂದೂಡಲಾಯಿತು.

ನನ್ನ ಉಕ್ತಲೇಖನದ ರೀತ್ಯಾತೆರೆದ ನ್ಯಾಯಾಲಯದಲ್ಲಿ ಬೆರಳಚ್ಚುಮಾಡಲಾಯಿತು.

ಓ.ಹೆ.ಕೇ.ಸರಿ ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು
ಚಿಂತಾಮಣಿ